STRENGTH OF STAFF IN BELLARY MEDICAL COLLEGE

105 SRI B. E. RAMAIAH (Siruguppa).

Will the Minister for Health be pleased to State :—

(*a*) the sanctioned strength of staff, including Professors, Assistant Professors lecturers, Assistant Surgeons and other staff to Bellary Medical College :

(*b*) whether all the sanctioned posts in all cadres are filled up ;

(*c*) if not the number of Vanancies and reasons for not filling up the posts (Categorywise information be furnisheb ?

SRI H. SIDDAVEERAPPA.—(Minister for Health)

(*a*)	(i) Teaching	142
	(ii) Non-teaching	352
	Total ...	494

(*b*) No.

(*c*) (i) 17 Class I and 17 Class II teachers are vacant (as on 23-6-1973.)

(ii) Among the non-teachiug staff 27 class III posts are vacant (as on 23-6- 973.) Most of the Class I vacant posts of Teachers *Viz.* Professors/Associate Professors, Assistant Professors could not be filled for want of qualified Doctors. In-charge arrangements have been made wherever possible. The Class II posts of Teachers *viz.* Lefturers, Lecturers-cum-Registrars etc., have been referred to the Public Service Commissison for advertisement and selection, These posts will be filled as soon as the Public Service Commission's select list is received.

As regards the other non-teacthing vacant posts of class III Officers, action is being taken by the Director of Health and Family Planning Services, to fill up these posts early.

ಪರಿಶಿಷ್ಟ ವರ್ಗ ಪರಿಶಿಷ್ಟ ಜನಾಂಗದವರಿಗೆ ಕೊಟ್ಟಿರುವ ನಿವೇಶನಗಳು

೧೦೯ ಶ್ರೀ ಎ. ಎಚ್. ಜಯಪ್ರಕಾಶನಾರಾಯಣ (ಸಿರ್ಸಿ),—

ನಗರಾಡಳಿತ ಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗೆ ಉತ್ತರ ಕೊಡುವರೆ :—

(ಅ) ಕಳೆದ ಹತ್ತು ತಿಂಗಳಿಂದ ರಾಜ್ಯದ ಯಾವ ತಾಲ್ಲೂಕುಗಳಲ್ಲಿ ಬಡವರಿಗೆ ಮುಪ್ಪತ್ತಾಗಿ ವಸತಿಗಾಗಿ, ಎಷ್ಟೆಷ್ಟು ಪ್ಲಾಟು ವಿಂಗಡಿಸಿ ವಿಲೇವಾರಿ ಮಾಡಿಸಿದ್ದಾರೆ,

(ಆ) ಈ ಪ್ಲಾಟುಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಕೊಟ್ಟಿರುವ ಪ್ಲಾಟುಗಳ ಸಂಖ್ಯೆಯನ್ನು ತಾಲ್ಲೂಕುವಾರು ತಿಳಿಸಬೇಗಾಗಿ ಪ್ರಾರ್ಥನೆ,

(ಇ) ಈ ಪ್ಲಾಟುಗಳ ಮೇಲೆ ಮನೆ ಕಟ್ಟಲು ಸರ್ಕಾರ ಒದಗಿಸಿಕೊಟ್ಟಿರುವ ಸಹಾಯ ಸೌಲಭ್ಯಗಳೇನು ?

(ಈ) ಈ ಸಹಾಯ ಸೌಲಭ್ಯಗಳನ್ನು ಪಡೆದು ಕಟಲ್ಪಟ್ಟಿರುವ ಮನೆಗಳ ಸಂಖ್ಯೆಯೆಷ್ಟು ?

ಶ್ರೀ ಬಿ. ಬಸವಲಿಂಗಪ್ಪ.—(ನಗರಾಡಳಿತ ಮಂತ್ರಿಗಳು)

ಉತ್ತರ.—(ಅ) ಒಟ್ಟು ೨,೩೩,೮೮೮ ನಿವೇಶನಗಳು ತಾಲ್ಲೂಕುವಾರು ವಿವರಗಳನ್ನು ಲಗತಿಸಿರುವ ಪಟ್ಟಿಯಲ್ಲಿ ಕೊಡಲಾಗಿದೆ.

(ಆ) ಒಟ್ಟು ೮೧,೯೩೭ ನಿವೇಶನಗಳು ಮೇಲಿನ ಪಟ್ಟಿಯಲ್ಲಿವೆ.

(ಇ) ಉಚ್ಚಿತವಾಗಿ ಕೊಟ್ಟಿರುವ ನಿವೇಶನಗಳ ಮೇಲೆ ಮನೆ ಕಟ್ಟಲು ಸುಲಭ ಕಂತುಗಳಲ್ಲಿ ಮರು ಪಾವತಿ ಮಾಡಬಹುದಾದ ಮನೆ ಒಂದಕ್ಕೆ ರೂ. ೨,೦೦೦ ಸಾವಿರದಿಂದ ರೂ. ೨,೫೮೦ ರವರೆಗೆ ಸಾಲ ಮತ್ತು ಸಹಾಯ ಧನವನ್ನು ಕೊಡಲು ಯೋಜಿಸಲಾಗಿದೆ. ಸರ್ಕಾರವು ತನ್ನ ಯೋಜನಾ ವೆಚ್ಚದ ಅಂದಾಜಿನಲ್ಲಿ ೧೯೭೩–೭೪ನೇ ಸಾಲಿನಲ್ಲಿ ೫ ಕೋಡಿ ರೂ.ಗಳನ್ನು ಈ ಉದ್ದೇಶಕಾಗಿ ಒದಗಿಸಿದೆ. ಈ ಹೊಸ ಯೋಜನೆಯು ಇನ್ನೂ ಪ್ರಥಮಹಂತಗಲ್ಲಿದೆ.

(ಈ) ಇನೂ ಇಲ್ಲ.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಸಂಖ್ಯೆ.

೧೭೦ ಶ್ರೀ ಕೊಣಂದೂರ್ ಲಿಂಗಪ್ಪ (ತೀರ್ಥಹಳ್ಳಿ).—

ಸಮಾಜ ವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವರೇ ?

(ಅ) ಒಟ್ಟು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಸಂಖ್ಯೆ ಎಷ್ಟು ;

(ಆ) ಅವರಲ್ಲಿ ಯಾವ ಜನಾಂಗದವರು ಎಷ್ಟು ಜನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿದ್ದಾರೆ ?

(ಇ) ಬಹಳಷ್ಟು ಸಂಖ್ಯೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಿಂದುಳಿದ ಪಂಗಡಕ್ಕೆ ಅಥವಾ ನಿಮ್ನ ವರ್ಗಕ್ಕೆ ಸೇರಿದವರಲ್ಲವೆ ;

(ಈ) ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕೈ ಕೆಳಗೆ ಅಥವಾ ಹಂತದಲ್ಲಿ ಕೆಲಸ ಮಾಡಿದ ಅನೇಕ ಅಕೌಂಟೆಂಟ್‌ರುಗಳು ಮತ್ತು ಗೆಜೆಟೆಡ್ ದರ್ಜೆಯಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗಿಂತ ಜೂನಿಯರ್ ಆಗಿದ್ದ ತಹಶೀಲ್ದಾರರವರುಗಳು ಈಗಾಗಲೇ ಬಡ್ತಿ ಪಡೆದು ಅಸಿಸ್ಟೆಂಟ್ ಕಮಿಷನರುಗಳಾಗಿದ್ದು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಅವರ ಕೈ ಕೆಳಗೆ ಕೆಲಸ ಮಾಡುತಿರುವ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ರೀತಿ ಅದರಲ್ಲಿ ಅಧಿಕಾರಿಗಳಲ್ಲಿ ಯಾವ ಬಗೆಯ ಉತ್ಸಾಹ ಹಾಗೂ ದಕ್ಷತೆಯಿಂದ ಕೆಲಸ ಮಾಡುವ ಭಾವನೆ ಬರುತ್ತೆ ಇದರಿಂದ ಸರ್ಕಾರ ಹಾಗೂ ಸಾರ್ವಜನಿಕರ ಕಾರ್ಯಕ್ಕೆ ಭಗ್ನ ಬರುವುದಿಲ್ಲವೆ ;

(ಊ) ಅಥವಾ ಹಿಂದುಳಿದ ಹಳ್ಳಿಯ ಜನರ ಹಾಗೂ ಹಳ್ಳಿಗಳ ಉದ್ಧಾರಕ್ಕಾಗಿ ಹೊಸದಾಗಿ ನೇಮಿಸಿದೆ ಹಿಂದೇಳಿದ ಅಲ್ಲದೇ ಹಳ್ಳಿಗಳ ಹಿನ್ನೆಲೆಯಂಳ್ಳ ಈ ಅಧಿಕಾರಿಗಳು ಸಹ ಹಿಂದುಳಿದವರಾಗಿಯೇ ಇರಬೇಕೆಂದು ಸರ್ಕಾರದ ಅಭಿಲಾಷೆಯೋ ;

(ಋ) ಈ ವ್ಯತ್ಯಾಸವನ್ನು ಹೋಗಲಾಡಿಸಲು ಬಹಳ ವರ್ಷಗಳ ಹಿಂದೆಯೇ ತಾಸೀಲ್ದಾರರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ವಿನಿಯಮ ಮಾಡಲು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿದ್ದು ನಿಜವೆ ? ನಿಜವಾಗಿದಲ್ಲಿ ಏತಕ್ಕೆ ಸದರೀ ತೀರ್ಮಾನವನ್ನು ಕಾರ್ಯಗತಗೊಳಿಸಲಿಲ್ಲ ;

(ಎ) ಈಗಲಾದರೂ ಸರ್ಕಾರ ಈ ಅನ್ಯಾಯವನ್ನು ತಪ್ಪಿಸಲು ಕ್ರಮ ಕೈಕೊಳ್ಳುವುದೆಂದು ಆಶಿಸ ಬಹುದೆ ?

ಶ್ರೀ ಎಂ, ಮಲ್ಲಿಕಾರ್ಜುನ ಸ್ವಾಮಿ.—(ಸಮಾಜ ವಿಕಾಶ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು)

(ಅ) ೨೦೮.

(ಆ) (೧) ಪರಿಶಿಷ್ಟ ಜಾತಿ
(೨) ಪರಿಶಿಷ್ಟ ವರ್ಗ ೩೮

(೩) ಇತರೆ ೧೭೦